# ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳಗಾವಿಯ ಪಾತ್ರ

**ಅರುಣ ಚಿ. ಕಲ್ಲೋಳಿಕರ**

ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ.

DOI: https://doi.org/10.5281/zenodo.17411459

## ABSTRACT:

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳಗಾವಿ ಜಿಲ್ಲೆಯ ಮಹತ್ವದ ಪಾತ್ರವನ್ನು ಈ ಲೇಖನ ವಿವರಿಸುತ್ತದೆ. ಬೆಳಗಾವಿಯು ಬ್ರಿಟಿಷ್ ವಿರೋಧಿ ಹೋರಾಟದ ದಕ್ಷಿಣ ಭಾರತದ ಪ್ರಮುಖ ಕೇಂದ್ರವಾಗಿತ್ತು. ಭಾರತದ ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾಗುವ ಮೊದಲೇ ಕಿತ್ತೂರು ರಾಣಿ ಚೆನ್ನಮ್ಮಳು ಬ್ರಿಟಿಷರ ವಿರುದ್ಧ ದಂಗೆ ಎದ್ದು ಈ ಭಾಗದ ಜನರಿಗೆ ಸ್ಫೂರ್ತಿ ನೀಡಿದಳು. ಇದರ ಅತ್ಯಂತ ಪ್ರಮುಖ ಅಂಶವೆಂದರೆ, 1924ರಲ್ಲಿ ಮಹಾತ್ಮ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನ. ಈ ಅಧಿವೇಶನವು ಅಸ್ಪೃಶ್ಯತೆ ನಿರ್ಮೂಲನೆ, ಖಾದಿ ಪ್ರಚಾರ, ಮತ್ತು ಸ್ವರಾಜ್ಯದಂತಹ ರಚನಾತ್ಮಕ ಕಾರ್ಯಕ್ರಮಗಳನ್ನು ದೇಶಾದ್ಯಂತ ಕೊಂಡೊಯ್ಯಲು ನಾಂದಿ ಹಾಡಿತು. ಜೊತೆಗೆ, ಬ್ರಾಹ್ಮಣೇತರ ಚಳುವಳಿ ಮತ್ತು ದಲಿತರ ಸಾಮಾಜಿಕ ಸುಧಾರಣಾ ಚಳುವಳಿಗಳಿಗೂ ಬೆಳಗಾವಿ ಕೇಂದ್ರವಾಗಿತ್ತು. ಬೆಳಗಾವಿಯು ಕಾನೂನುಭಂಗ ಮತ್ತು 'ಭಾರತ ಬಿಟ್ಟು ತೊಲಗಿ' ಚಳುವಳಿಗಳಲ್ಲೂ ಸಕ್ರಿಯವಾಗಿ ಭಾಗವಹಿಸಿ ಸ್ವಾತಂತ್ರ್ಯಕ್ಕೆ ನಿರ್ಣಾಯಕ ಕೊಡುಗೆ ನೀಡಿದೆ.

## KEYWORDS:

ಬೆಳಗಾವಿ, ಗಾಂಧೀಜಿ, ಕಾಂಗ್ರೆಸ್ ಅಧಿವೇಶನ (1924), ಕಿತ್ತೂರು ರಾಣಿ ಚೆನ್ನಮ್ಮ, ಬ್ರಾಹ್ಮಣೇತರ ಚಳುವಳಿ.

**ಪ್ರಸ್ತಾವನೆ:**

ಬೆಳಗಾವಿ ಜಿಲ್ಲೆಯು ಕರ್ನಾಟಕದಲ್ಲಿಯ ಒಂದು ಪ್ರಮುಖವಾದ ಜಿಲ್ಲೆಯಾಗಿದೆ. ಈ ಜಿಲ್ಲೆಯು ಕ್ರಿ.ಪೂರ್ವದಿಂದಲೂ ತನ್ನದೇಯಾದ ಇತಿಹಾಸವನ್ನು ಹೊಂದಿದೆ. ಮೌರ್ಯರು, ಶಾತವಾಹನರು, ಕದಂಬರ ಆಳ್ವಿಕೆಯ ಕಾಲದಿಂದ ಬ್ರಿಟಿಷ್ ಆಳ್ವಿಕೆಯ ಕಾಲದವರೆಗೂ ವಿವಿಧ ರಾಜಮನೆತನಗಳು ಆಳ್ವಿಕೆ ಮಾಡಿ ತಮ್ಮದೇಯಾದ ಕೊಡುಗೆಗಳನ್ನು ನೀಡಿವೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳಗಾವಿಯು ದಕ್ಷಿಣ ಭಾರತದಲ್ಲಿ ಒಂದು ಪ್ರಮುಖ ಸ್ಥಳವಾಗಿ, ಮಹತ್ವದ ಕಾರ್ಯನಿರ್ವಹಿಸಿದೆ. ದೇಶದ ಸ್ವಾತಂತ್ರ್ಯ ಚಳುವಳಿಯ ಪೂರ್ವದಲ್ಲಿಯೆ ಕಿತ್ತೂರು ರಾಣಿ ಚೆನ್ನಮ್ಮಳು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳುವಳಿ ಪ್ರಾರಂಭಿಸಿದಳು. ಇದೇ ರೀತಿಯಾಗಿ ಮುಂಬೈಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ನಂತರ ಕಾಂಗ್ರೆಸಿನ ಎಲ್ಲಾ ರಾಷ್ಟ್ರೀಯ ನಾಯಕರು ಬೆಳಗಾವಿಗೆ ಬಂದು ಹಲವಾರು ಕಾರ್ಯಕ್ರಮ ಆಯೋಜಿಸಿ ಜನರನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಕರೆ ನೀಡುತ್ತಿದ್ದರು. ಪ್ರಮುಖವಾದ ಸಂಗತಿಯೆಂದರೆ 1924ರಲ್ಲಿ ನಡೆದ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನವು ಭಾರತ ಸ್ವಾತಂತ್ರ್ಯ ಚಳುವಳಿಯ ದಿಕ್ಕನ್ನೇ ಬದಲಾಯಿಸಿತು. ಇಲ್ಲಿಂದಲೇ ಭಾರತದ ತುಂಬಾ ಹಲವಾರು ಹೋರಾಟಗಳು, ರಚನಾತ್ಮಕ ಕಾರ್ಯಕ್ರಮಗಳು ಪ್ರಾರಂಭಗೊಂಡು ಈ ಕಾರ್ಯಕ್ರಮಗಳಿಂದ ಭಾರತೀಯರೆಲ್ಲರೂ ಒಂದುಗೂಡಲು ಸಾಧ್ಯವಾಯಿತು.

ಇದೇ ರೀತಿಯಾಗಿ ಜ್ಯೋತಿಭಾಫುಲೆ, ಡಾ. ಅಂಬೇಡ್ಕರವರು, ಸಿದ್ಧಪ್ಪ ಕಂಬಳಿ, ದೇವರಾಯ ಇಂಗಳಿ ಹಾಗೂ ಮುಂತಾದವರು ಬ್ರಾಹ್ಮಣೇತರ ಚಳುವಳಿಯ

ಕಾರ್ಯಕ್ರಮಗಳನ್ನು ರೂಪಿಸಿ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಯನ್ನು ಪ್ರಾರಂಭಿಸಿರುವುದು ಈ ನೆಲದಿಂದಲೇ. ಆದುದರಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಹೆಬ್ಬಾಗಿಲಿನಂತೆ ಬೆಳಗಾವಿಯು ಕಾರ್ಯನಿರ್ವಹಿಸಿದೆ. ದೇಶದ ಹಲವಾರು ನಾಯಕರು ಬೆಳಗಾವಿಗೆ ಭೇಟಿ ನೀಡಿ ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆ ನೀಡಿರುವುದು ಅತ್ಯಂತ ಮಹತ್ವವಾದ ಸಂಗತಿಯಾಗಿದೆ. ಈ ಕಿರು ಲೇಖನದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳಗಾವಿಯ ಪಾತ್ರವನ್ನು ಹಾಗೂ ಪರಿಣಾಮಗಳನ್ನು ಕುರಿತು ವಿವರಿಸಲಾಗಿದೆ.

**ಕಿತ್ತೂರಿನ ಸ್ವಾತಂತ್ರ್ಯ ಚಳುವಳಿಯ ಪ್ರಭಾವ:**

ಭಾರತದಲ್ಲಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾಗುವ ಮೊದಲು ಬೆಳಗಾವಿಯ ಕಿತ್ತೂರಿನಲ್ಲಿ ರಾಣಿ ಚೆನ್ನಮ್ಮಳ ನಾಯಕತ್ವದಲ್ಲಿ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಯಿತು. ಕಿತ್ತೂರು ಸಂಸ್ಥಾನದ ರಾಜ ಮಲ್ಲಸರ್ಜನು 2ನೆಯ ಪತ್ನಿಯಾಗಿ ಚೆನ್ನಮ್ಮಳನ್ನು ವಿವಾಹವಾದನು (ಮೊದಲನೆಯವಳು ರುದ್ರಮ್ಮ). ಅವನು ಅನಾರೋಗ್ಯಪೀಡಿತನಾದಾಗ ಚೆನ್ನಮ್ಮಳು ಕಿತ್ತೂರು ರಾಜ್ಯದ ನಾಯಕತ್ವ ವಹಿಸಿಕೊಂಡು ಮಸ್ತಮರಡಿಯ ಬಾಳಪ್ಪ ಗೌಡನ ಮಗ ಶಿವಲಿಂಗ ರುದ್ರಸರ್ಜನನ್ನು ದತ್ತು ಪಡೆದು 1824 ಸೆಪ್ಟೆಂಬರ್ 11ರಂದು ಆತನಿಗೆ ಪಟ್ಟಾಭಿಷೇಕ ಮಾಡಿದಳು. ಅದೇ ದಿವಸ ಸಂಜೆಯ ವೇಳೆಯಲ್ಲಿ ಮಲ್ಲಸರ್ಜ ನಿಧನನಾದನು. ಅನಂತರದಲ್ಲಿ ದತ್ತಕ ತೆಗೆದುಕೊಂಡ ವಿಷಯವನ್ನು ಧಾರವಾಡ ಕಲೆಕ್ಟರ್ ಥ್ಯಾಕರೆಗೆ ವಿಷಯ ತಿಳಿಸಿ ಪತ್ರ ಕಳುಹಿಸಿದಳು. ಆದರೆ, ಥ್ಯಾಕರೆಯು ಈ ಪತ್ರವನ್ನು ಮಾನ್ಯ ಮಾಡಲಿಲ್ಲ. ಮಲ್ಲಪ್ಪ ಶೆಟ್ಟಿಯಂತಹ ದೇಶದ್ರೋಹಿಗಳ ಕುತಂತ್ರದಿAದ ಥ್ಯಾಕರೆ 1824 ಅಕ್ಟೋಬರ್ 20 ರಂದು ಕಿತ್ತೂರಿನ ಮೇಲೆ ಯುದ್ಧ ಪ್ರಾರಂಭಿಸಿದನು. ಚೆನ್ನಮ್ಮಳು ಹಾಗೂ ಗುರುಸಿದ್ಧಪ್ಪನ ನಾಯಕತ್ವದ ಸೈನ್ಯ ಬ್ರಿಟಿಷರ ವಿರುದ್ಧ ಜಯಗಳಿಸಿತು. ಅಮಟೂರ ಬಾಳಪ್ಪ ಥ್ಯಾಕರೆಯನ್ನು ಗುಂಡಿಟ್ಟು ಕೊಂದನು. ಈ ಸುದ್ದಿಯು ಬ್ರಿಟಿಷ್ ಕಮೀಷನರಿಗೂ ತಿಳಿದು ಆತ ಬೃಹತ್ ಸೈನ್ಯ ಸಂಘಟಿಸಿ ಕಿತ್ತೂರಿನ ಮೇಲೆ ಯುದ್ಧ ಸಾರಿ ಕಿತ್ತೂರನ್ನು ವಶಪಡಿಸಿಕೊಂಡನು. ಒಟ್ಟಾರೆಯಾಗಿ ರಾಣಿ ಚೆನ್ನಮ್ಮಳ ನಾಯಕತ್ವದಲ್ಲಿ ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟವು ಬೆಳಗಾವಿ ಪ್ರದೇಶದ ಜನರಲ್ಲಿ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿಯನ್ನು ನೀಡಿತು.

**1818ರಿಂದ 1947ರ ಅವಧಿಯ ದಂಗೆಗಳು:**

1885ರಲ್ಲಿ ಬಾಂಬೆಯಲ್ಲಿ ಎ.ವ್ಯ. ಹ್ಯೂಮ್‌ರವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಿಸಿದ ನಂತರ ಕಾಂಗ್ರೆಸ್ ನಾಯಕರ ಪ್ರಭಾವವು ಮುಂಬೈ ಕರ್ನಾಟಕದ ಮೇಲೆ ಬೀರಿತು. ಬ್ರಿಟಿಷರ ವಿರುದ್ಧ ಬೆಳಗಾವಿ, ನಿಪ್ಪಾಣಿ, ಹಡಗಲಿ ಮತ್ತು ನರಗುಂದ ಮುಂತಾದ ಕಡೆ ದಂಗೆಗಳು ತೀವ್ರಗೊಂಡವು. ಹಲವಾರು ನಾಯಕರು ಬೆಳಗಾವಿಗೆ ಬಂದು ಹೋಗಲು ಪ್ರಾರಂಭಿಸಿ ಹೋರಾಟಗಾರರಿಗೆ ಬೆಂಬಲ ಸೂಚಿಸಿದರು. ಇದರಿಂದ ಬೆಳಗಾವಿಯು ಕರ್ನಾಟಕದಲ್ಲಿಯೇ ಒಂದು ಸ್ವಾತಂತ್ರ್ಯ ಚಳುವಳಿಯ ಕೇಂದ್ರವಾಗಿ ನಿರ್ವಹಿಸಿತು.

**ಬೆಂಗಾಲ ವಿಭಜನೆಯ ಪ್ರಭಾವ:**

1905ರಲ್ಲಿ ಬ್ರಿಟಿಷರು ಬಂಗಾಳವನ್ನ ವಿಭಜಿಸಿದರು. ಇದರ ವಿರುದ್ಧ ಸ್ವಾತಂತ್ರ್ಯ ಹೋರಾಟಗಾರರು ದೇಶದ ತುಂಬ ಪ್ರತಿಭಟನೆಗಳನ್ನು ಪ್ರಾರಂಭಿಸಿದರು. ಮುಂಬೈ ಕರ್ನಾಟಕದ ಭಾಗದಲ್ಲಿಯೂ ಈ ಪ್ರತಿಭಟನೆಗಳು ತೀವ್ರಗೊಂಡವು. ಸ್ವದೇಶಿ ಚಳುವಳಿ ತೀವ್ರಗೊಂಡು ಬೆಂಕಿಕಡ್ಡಿಯ ಕಾರ್ಖಾನೆಗಳನ್ನು ಬೆಳಗಾವಿ, ಬಿಜಾಪುರ ಮತ್ತು ಧಾರವಾಡದಲ್ಲಿ

ಪ್ರಾರಂಭಿಸಲಾಯಿತು. ಕಲೇಕರರವರು ಬೆಳಗಾವಿಯಲ್ಲಿ, ದೊಂಡಪಂತರು ನವಲಗುಂದದಲ್ಲಿ ರಾಷ್ಟ್ರೀಯ ಶಾಲೆಗಳನ್ನು ಪ್ರಾರಂಭಿಸಿದರು. ಆದರೆ ಬ್ರಿಟಿಷರು ಇವುಗಳಿಗೆ ಮಾನ್ಯತೆ ನೀಡಲಿಲ್ಲ. ಈ ಶಾಲೆಗಳು ವೈದಿಕ ಶಿಕ್ಷಣ ನೀಡದ್ದರಿಂದ ಬ್ರಾಹ್ಮಣೇತರರು, ಶೋಷಿತರು ಈ ಶಾಲೆಗಳಿಗೆ ಹೋಗಲು ಸಾಧ್ಯವಾಗಲಿಲ್ಲ.

ಬ್ರಿಟಿಷರ ವಿರುದ್ಧ ಲೇಖನಗಳನ್ನು ಪ್ರಕಟಿಸಿದ್ದರಿಂದ ತಿಲಕರನ್ನು 1908 ರಿಂದ 1914ರವರೆಗೆ ಬಂಧಿಸಿದರು. ಇವರ ಬಿಡುಗಡೆಯ ನಂತರ ಅವರು ಬೆಳಗಾವಿಗೆ ಬಂದು ರಾಜಕೀಯ ಸಮಾವೇಶಗಳನ್ನು ಆಯೋಜಿಸಿ ಯುವಕರಿಗೆ ರಾಜಕೀಯದಲ್ಲಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಕರೆ ನೀಡಿದರು. ನಂತರ ಧಾರವಾಡ, ಮಂಗಳೂರು ಮತ್ತು ಕಾರವಾರಗಳಲ್ಲಿ ಇಂತಹ ಸಭೆಗಳನ್ನು ಆಯೋಜಿಸಿದರು. 1911ರಲ್ಲಿ ಬಂಗಾಳ ವಿಭಜನೆ ರದ್ದಾಯಿತು. ಆಲೂರ್ ವೆಂಕಟರಾಯರು, ಗಂಗಾಧರ ದೇಶಪಾಂಡೆಯವರು, ಮದ್ರಾಸ್ ಪ್ರಾಂತ್ಯದ ಬಳ್ಳಾರಿ ಮತ್ತು ಮಂಗಳೂರನ್ನು ಮುಂಬೈ ಕರ್ನಾಟಕಕ್ಕೆ ಸೇರಿಸಿ ಏಕೀಕರಣಗೊಳಿಸಲು ಬೇಡಿಕೆ ಇಟ್ಟರು. ಬಾಲಗಂಗಾಧರ ತಿಲಕರ ಪ್ರಭಾವದಿಂದ ಈ ಭಾಗದ ಯುವಕರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಂಘಟಿತರಾಗಿ ಹೋರಾಡಲು ಸಾಧ್ಯವಾಯಿತು.

**ಬೆಳಗಾವಿಯ ಕಾಂಗ್ರೆಸ್ ಅಧಿವೇಶನ 1924:**

ಭಾರತದಲ್ಲಿ ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯ ನಾಯಕತ್ವವನ್ನು ವಹಿಸಿಕೊಂಡ ನಂತರ ಅದರ ಹೋರಾಟದ ಸ್ವರೂಪವೇ ಬದಲಾಯಿತು. ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಅವರು ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡರು. ಅವರು ಹೋರಾಟದಲ್ಲಿ ಸತ್ಯ, ಅಹಿಂಸೆ, ಶಾಂತಿ, ಉಪವಾಸ ಮತ್ತು ಸತ್ಯಾಗ್ರಹ ಎಂಬ ಅಸ್ತ್ರಗಳನ್ನು ಪ್ರಯೋಗಿಸಿ ಹೋರಾಟದ ದಿಕ್ಕನ್ನೇ ಬದಲಾಯಿಸಿದರು. ಅವರ ಅಧ್ಯಕ್ಷತೆಯಲ್ಲಿ ಭಾರತದಲ್ಲಿ ಏಕೈಕ ಕಾಂಗ್ರೆಸ್ ಅಧಿವೇಶನವೆಂದರೆ ಅದು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ. ಇಲ್ಲಿ ತೆಗೆದುಕೊಂಡ ತೀರ್ಮಾನಗಳು ಭಾರತ ಸ್ವಾತಂತ್ರ್ಯ ಚಳುವಳಿಯ ದಿಕ್ಕನ್ನೇ ಬದಲಾಯಿಸಿತು. 1924ರಲ್ಲಿ ನಡೆದ ಈ ಸಮಾವೇಶದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಗಂಗಾಧರ ದೇಶಪಾಂಡೆ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಕೆಂಬಾವಿ ಆಯ್ಕೆಯಾದರು. ಎಚ್. ನರಸಿಂಹಯ್ಯ ಗಾಂಧೀಜಿ ಅವರ ಭಾಷಣವನ್ನು ಕನ್ನಡದಲ್ಲಿ ಅನುವಾದಿಸಿದರು. ಈ ಸಮ್ಮೇಳನದಲ್ಲಿ ರಾಷ್ಟ್ರೀಯ ನಾಯಕರಾದ ಜವಾಹರಲಾಲ್ ನೆಹರೂ, ವಲ್ಲಭಾಯಿ ಪಟೇಲ್, ಸರೋಜಿನಿ ನಾಯ್ಡು, ರಾಜೇಂದ್ರ ಪ್ರಸಾದ್ ಹಾಗೂ ಕರ್ನಾಟಕದ ಹರ್ಡೇಕರ ಮಂಜಪ್ಪ, ಎಸ್. ನಿಜಲಿಂಗಪ್ಪ, ವಿ.ಕ. ವೆಂಕಟಪ್ಪ ಮತ್ತು ಎಚ್. ಕೆ. ವೀರನಗೌಡ ಮುಂತಾದ ಭಾರತದ ಪ್ರಮುಖ ನಾಯಕರೆಲ್ಲ ಬೆಳಗಾವಿ ಅಧಿವೇಶನದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು. ಈ ಸಮ್ಮೇಳನದಲ್ಲಿ ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಗಾರರಿಗೆ ಸ್ವಾತಂತ್ರ್ಯ, ಸ್ವರಾಜ್ಯ ಮುಂತಾದ ರಚನಾತ್ಮಕ ಕಾರ್ಯಕ್ರಮಗಳಿಗೆ ಕರೆ ನೀಡಿದರು.

**ಪ್ರಮುಖ ತೀರ್ಮಾನಗಳು:**

ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಹಲವಾರು ವಿಷಯಗಳನ್ನು ಪ್ರಸ್ತಾಪಿಸಿ ಅವುಗಳನ್ನು ಜಾರಿಗೆ ತರಲು ಕರೆನೀಡಿದರು. ಆ ಪ್ರಮುಖ ವಿಷಯಗಳೆಂದರೆ, ಅಸ್ಪೃಶ್ಯತೆ ನಿರ್ಮೂಲನ ಕಾರ್ಯಕ್ರಮ, ಸ್ವದೇಶಿ ಚಳುವಳಿ, ಗ್ರಾಮೀಣಾಭಿವೃದ್ಧಿ, ಖಾದಿ ಬಳಕೆ, ಸ್ವದೇಶಿ ವಸ್ತುಗಳ ಪ್ರಚಾರ, ಪಾನ ನಿರೋಧಕ ಕಾರ್ಯಕ್ರಮ, ಮಹಿಳಾ ಸಬಲೀಕರಣ, ನೈರ್ಮಲ್ಯ, ಕಾನೂನುಭಂಗ ಚಳುವಳಿ, ನಾಡಿನ

ಏಕತೆ ಮುಂತಾದ ರಚನಾತ್ಮಕ ಕಾರ್ಯಗಳ ಬಗ್ಗೆ ಕರೆ ನೀಡಿ ಜಾರಿಗೊಳಿಸಲು ತಿಳಿಸಿದರು. ಇಲ್ಲಿ ಪ್ರತಿದಿನ ಹಲವಾರು ವಿಷಯಗಳ ಬಗ್ಗೆ ಚರ್ಚೆಯಾಗುತ್ತಿತ್ತು. ಕರ್ನಾಟಕ ಏಕೀಕರಣದ ಬಗ್ಗೆ ಗೋಷ್ಠಿಗಳು, ರಾಷ್ಟ್ರೀಯ ಚಳುವಳಿಯ ರಚನಾತ್ಮಕ ಕಾರ್ಯಕ್ರಮ, ಗೋಷ್ಠಿಗಳು ಮುಂತಾದ ಗೋಷ್ಠಿಗಳನ್ನು ಆಯೋಜಿಸಿ ಸ್ವಾತಂತ್ರ್ಯ ಹೋರಾಟಗಾರರಿಗೆ ಈ ಸಮ್ಮೇಳನ ಪ್ರೇರಣೆಯನ್ನು ನೀಡಿತು.

**ಪರಿಣಾಮಗಳು:**

ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ 1924ರಲ್ಲಿ ನಡೆದ ಬೆಳಗಾವಿಯ ಕಾಂಗ್ರೆಸ್ ಅಧಿವೇಶನ ಭಾರತದ ಸ್ವಾತಂತ್ರ್ಯ ಚಳುವಳಿಗೆ ಒಂದು ದಿಕ್ಸೂಚಿಯಾಯಿತು. ಪ್ರಥಮ ಬಾರಿಗೆ ರಚನಾತ್ಮಕ ಕಾರ್ಯಕ್ರಮಗಳನ್ನು ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಕೈಗೊಂಡು ಜನರನ್ನು ಒಂದುಗೂಡಿಸಲು ಸಾಧ್ಯವಾಯಿತು. ಗಾಂಧೀಜಿಯವರು ಸತ್ಯ, ಅಹಿಂಸೆ, ಉಪವಾಸ, ಸತ್ಯಾಗ್ರಹ ತತ್ವಗಳು ದೇಶದ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರೇರಣೆಯಾದವು. ಹೋರಾಟಗಾರರು ಶಸ್ತ್ರಗಳನ್ನು ತ್ಯಜಿಸಿ ಗಾಂಧೀಜಿಯವರ ಹೋರಾಟದ ವಿಧಾನವನ್ನು ಅನುಸರಿಸಿ ದೇಶದ ತುಂಬ ಸ್ವಾತಂತ್ರ್ಯ ಚಳುವಳಿಯನ್ನು ಪ್ರಾರಂಭಿಸಿದರು.

ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಿಂದ ಪ್ರಭಾವಿತರಾದ ಜನಸಾಮಾನ್ಯರು, ಶೋಷಿತರು, ಹಿಂದುಳಿದ ವರ್ಗದವರು, ಬ್ರಾಹ್ಮಣೇತರರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳಲು ಪ್ರಾರಂಭಿಸಿದರು. ಗಾಂಧೀಜಿಯ ಅನುಯಾಯಿಗಳು ರಚನಾತ್ಮಕ ಕಾರ್ಯಕ್ರಮ ಹಾಕಿಕೊಂಡು ಭಾರತದ ತುಂಬಾ ಅಸ್ಪೃಶ್ಯ ನಿರ್ಮೂಲನಾ ಕಾರ್ಯಕ್ರಮ, ಪಾನನಿರೋಧ, ಖಾದಿ ನೂಲುವುದು, ನೈರ್ಮಲ್ಯ, ಗ್ರಾಮಾಭಿವೃದ್ಧಿ ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳನ್ನು ಜಾರಿಗೆ ತಂದು ಪ್ರಚಾರ ಮಾಡಿದ್ದರಿಂದ ಭಾರತದ ಗ್ರಾಮೀಣ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು. ಮಹಿಳಾ ಸಬಲೀಕರಣ ಕಾರ್ಯಕ್ರಮಗಳು ಮಹಿಳೆಯರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರಣೆಯಾದವು. 1923ರಲ್ಲಿ ಎನ್.ಎಸ್. ಹರ್ಡಿಕರರವರು ಬೆಳಗಾವಿಯಲ್ಲಿ, ಹುಬ್ಬಳ್ಳಿ, ಬಾಗಲಕೋಟೆ ಮುಂತಾದ ಕಡೆ ಸೇವಾದಳವನ್ನು ಸ್ಥಾಪಿಸಿ ಗಾಂಧಿ ಪ್ರಸ್ತಾಪಿಸಿದ ರಚನಾತ್ಮಕ ಕಾರ್ಯಕ್ರಮ ಪ್ರಾರಂಭಿಸಿ ಜನಸಾಮಾನ್ಯರ ಸ್ವಾತಂತ್ರ್ಯ ಚಳುವಳಿಗೆ ಪ್ರೇರೇಪಿಸಿ ಭಾಗವಹಿಸುವಂತೆ ಮಾಡಿದರು.

ಬೆಳಗಾವಿಯ ಸಮ್ಮೇಳನ ಮುಸ್ಲಿಂರನ್ನು, ಸ್ವರಾಜ್ಯ ಪಕ್ಷದವರನ್ನು ಒಂದುಗೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿತು. ಗಾಂಧೀಜಿಯವರ ಅಸ್ಪೃಶ್ಯತಾ ನಿರ್ಮೂಲನಾ ಕಾರ್ಯಕ್ರಮಗಳು ಹಾಗೂ ಅವರ ಅನುಯಾಯಿಗಳು ವರ್ಣ, ಜಾತಿ, ಅಸ್ಪೃಶ್ಯತೆ, ಸಾಮಾಜಿಕ ಮತ್ತು ಧಾರ್ಮಿಕ ಹಿಂದೂ ಧರ್ಮದಲ್ಲಿ ಅನಿಷ್ಟ ಪದ್ಧತಿಗಳ ವಿರುದ್ಧ ಹಲವಾರು ಕಾರ್ಯಕ್ರಮಗಳನ್ನು ಭಾರತದ ತುಂಬಾ ಆಯೋಜಿಸಿ ಶೋಷಿತ ಸಮುದಾಯಗಳನ್ನು ಒಂದುಗೂಡಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು. ಗಾಂಧೀಜಿ ಸಾಬರಮತಿ ಆಶ್ರಮವನ್ನು ಈ ಕಾರ್ಯಕ್ರಮಗಳಿಗೆ ಬಿಟ್ಟುಕೊಟ್ಟರು.

1932ರಲ್ಲಿ ಗಂಗಾಧರ ದೇಶಪಾಂಡೆ ಬೆಳಗಾವಿಯಲ್ಲಿ ಹರಿಜನ ಸೇವಕ ಸಂಘ ಸ್ಥಾಪಿಸಿದರು. ವೀರನಗೌಡ ಪಾಟೀಲರು, ಹುಬ್ಬಳ್ಳಿಯಲ್ಲಿ ಹರಿಜನ ಬಾಲಕಾಶ್ರಮ ಶಾಲೆ ತೆರೆದರು. ಇದೇ ರೀತಿಯಾಗಿ ಪಿ. ಆರ್. ರಾಮಯ್ಯ, ಡಿ.ಕೆ. ಬಾರದ್ವಾಜ್, ತೆಗಡೂರು ರಾಮಚಂದ್ರರಾವ್, ಡಾ. ಸಿ.ಬಿ. ರಾಮರಾವ್, ಕೆ. ಶೇಷಾದ್ರಿ, ಎಂ. ವೆಂಕಟಕೃಷ್ಣಯ್ಯ

ಮುಂತಾದವರು ಅಸ್ಪೃಶ್ಯ ನಿರ್ಮೂಲನ ಮತ್ತು ಸಬಲೀಕರಣ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಶೋಷಿತರಲ್ಲಿ ಜಾಗೃತಿ ಮೂಡಿಸಿ ಅವರನ್ನು ಒಂದುಗೂಡಿಸುವಲ್ಲಿ ಪ್ರಮುಖಪಾತ್ರ ವಹಿಸಿದರು.

**ಕಾನೂನುಭಂಗ ಚಳುವಳಿ (ಉಪ್ಪಿನ ಸತ್ಯಾಗ್ರಹ):**

ಗಾಂಧೀಜಿಯವರು, ಬ್ರಿಟಿಷರ ಕಾಯಿದೆಯನ್ನು ಮುರಿದು 1930 ಏಪ್ರಿಲ್ ತಿಂಗಳಲ್ಲಿ ದಂಡಿಯಾತ್ರೆ ಕೈಗೊಂಡು ಉಪ್ಪಿನ ಸತ್ಯಾಗ್ರಹ ಮಾಡಿದರು. ಈ ಚಳುವಳಿಯಲ್ಲಿ ಬೆಳಗಾವಿ, ಹುಬ್ಬಳ್ಳಿ ಮುಂತಾದ ಕಡೆಯಿಂದ ಜನರು ಭಾಗವಹಿಸಿದರು. ಪ್ರಮುಖವಾಗಿ ಮೈಲಾರ ಮಹದೇವ ಭಾಗವಹಿಸಿದರು. ಏಪ್ರಿಲ್ 13, 1930ರಲ್ಲಿ ಅಂಕೋಲಾದಲ್ಲಿ ಸರ್ಕಾರದ ಕಾಯಿದೆಯನ್ನು ಮುರಿದು ಉಪ್ಪು ತಯಾರಿಸಿ ಉಪ್ಪಿನ ಸತ್ಯಾಗ್ರಹ ಮಾಡಲಾಯಿತು. ಅದರಲ್ಲಿ 30 ಸಾವಿರ ಜನ ಭಾಗವಹಿಸಿದ್ದರು.

**ಭಾರತ ಬಿಟ್ಟು ತೊಲಗಿ 1942:**

ಮುಂಬೈ ಕರ್ನಾಟಕ ಮತ್ತು ಸಮಗ್ರ ಕರ್ನಾಟಕದಲ್ಲಿ ಅತಿ ಹೆಚ್ಚು ಜನಪ್ರಿಯ ಸ್ವಾತಂತ್ರ್ಯ ಚಳುವಳಿ ಎಂದರೆ ಅದು ಚಲೇಜಾವ್ ಚಳುವಳಿ. ಗಾಂಧೀಜಿಯವರು 'ಮಾಡು ಇಲ್ಲವೆ ಮಡಿ' ಎಂಬ ಘೋಷ ವಾಕ್ಯವನ್ನು ಪಠಿಸಿದರು. ಇದು ಭಾರತದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಕೊನೆಯ ಬೃಹತ್ ಚಳುವಳಿಯಾಗಿದೆ. ಈ ಚಳುವಳಿ ಮುಂಬೈ ಕರ್ನಾಟಕ ಭಾಗದಲ್ಲೂ ತೀವ್ರ ಸ್ವರೂಪ ಪಡೆಯಿತು. ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಗೋಕಾಕ, ನಿಪ್ಪಾಣಿ, ಮೈಸೂರು, ಬೆಂಗಳೂರು, ಶಿವಮೊಗ್ಗ, ಹಾಸನ ಮತ್ತು ಮಂಡ್ಯ ಮುಂತಾದ ಕಡೆ ನಡೆದು ತೀವ್ರಸ್ವರೂಪ ಪಡೆಯಿತು. 30 ಸಾವಿರ ಕಾರ್ಮಿಕರು ಬ್ರಿಟಿಷರ ವಿರುದ್ಧ ಹಿಂಸಾತ್ಮಕ ಚಳುವಳಿ ಪ್ರಾರಂಭಿಸಿದರು. ಪೊಲೀಸ್ ಠಾಣೆ, ಅಂಚೆ ಕಛೇರಿ, ರೈಲ್ವೆ ನಿಲ್ದಾಣಕ್ಕೆ ಬೆಂಕಿ ಇಡಲಾಯಿತು. ಆಗಸ್ಟ್ 10, 1942ರಂದು ಬೆಳಗಾವಿ, ಬೈಲಹೊಂಗಲ, ಧಾರವಾಡ, ಹುಬ್ಬಳ್ಳಿಯಲ್ಲ ವಿದ್ಯಾರ್ಥಿಗಳು ಭಾಗವಹಿಸಿದರು. ಈ ಚಳುವಳಿಯು ಕರ್ನಾಟಕದ ತುಂಬಾ ಪ್ರಸಾರಗೊಂಡು ಬ್ರಿಟಿಷರ ವಿರುದ್ಧ ಬೃಹತ್ ಪ್ರಮಾಣದಲ್ಲಿ ಪ್ರತಿಭಟನೆಗಳು ನಡೆದು ಅವರ ಕಛೇರಿ, ರೈಲ್ವೆ ನಿಲ್ದಾಣ ಮುಂತಾದವುಗಳಿಗೆ ಬೆಂಕಿ ಹಚ್ಚಲಾಯಿತು.

**ಬ್ರಾಹ್ಮಣೇತರ ಚಳುವಳಿಯ ಪ್ರಭಾವ:**

ಮಹಾರಾಷ್ಟ್ರದಲ್ಲಿ ಜ್ಯೋತಿಭಾ ಪುಲೆಯವರು ಪ್ರಾರಂಭಿಸಿದ ಬ್ರಾಹ್ಮಣೇತರ ಚಳುವಳಿಯು ಹಾಗೂ ಸುಧಾರಣಾ ಚಳುವಳಿಯ ಪ್ರಭಾವ ಮುಂಬೈಕರ್ನಾಟಕದ ಮೇಲೆ ಬೀರಿತು. ಅವರ ಸತ್ಯಶೋಧಕ ಸಮಾಜದ ಕಾರ್ಯಗಳು, ಶಾಹುಮಹಾರಾಜ, ನಾಲ್ವಡಿ ಕೃಷ್ಣರಾಜ ಒಡೆಯರ್, ಡಾ. ಅಂಬೇಡ್ಕರ್, ಶ್ರೀ ಸಿದ್ದಪ್ಪ ಕಂಬಳಿ, ಶ್ರೀ ದೇವರಾಯ ಇಂಗಳಿಯವರ ಮೇಲೆಯೂ ಪ್ರಭಾವ ಬೀರಿ ಅವರು ಸಹ ಸುಧಾರಣಾ ಚಳುವಳಿ ಪ್ರಾರಂಭಿಸಿದ್ದರಿಂದ ಹಿಂದೂ ಧರ್ಮದ ಜಾತಿ, ವರ್ಣ, ಅಸ್ಪೃಶ್ಯತೆ, ಸ್ತ್ರೀ ಶೋಷಣೆ, ವಿರುದ್ಧ ಸುಧಾರಣಾ ಚಳುವಳಿ ಪ್ರಾರಂಭಿಸಿ ಹಿಂದುಳಿದ, ಶೋಷಿತ ವರ್ಗದವರಲ್ಲಿ ಶಿಕ್ಷಣದ ಅರಿವು ಮೂಡಿಸಿ ಹಲವಾರು ವಿಶ್ವವಿದ್ಯಾಲಯ, ಶಿಕ್ಷಣ ಸಂಸ್ಥೆಗಳನ್ನು, ವಸತಿ ನಿಲಯಗಳನ್ನು ಸ್ಥಾಪಿಸಿ ಶಿಕ್ಷಣ ನೀಡಿದ್ದರಿಂದ ಜನರಲ್ಲಿ ಜಾಗೃತಿವುಂಟಾಗಿ ಎಲ್ಲಾ ಶೋಷಿತ ಸಮುದಾಯಗಳು ಹಾಗೂ ಬ್ರಾಹ್ಮಣೇತರ ವರ್ಗದವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು. ಡಾ. ಅಂಬೇಡ್ಕರವರು, ಶ್ರೀ ಸಿದ್ದಪ್ಪ ಕಂಬಳಿಯವರು, ವ್ಹಿ.ಎಲ್. ಪಾಟೀಲರು ಮುಂಬೈಕರ್ನಾಟಕ ಭಾಗದಲ್ಲಿ ಬ್ರಾಹ್ಮಣೇತರ ಚಳುವಳಿ ಪ್ರಾರಂಭಿಸಿ ಜನರಲ್ಲಿ ಅರಿವು

ಮೂಡಿಸಿದರು.

ಡಾ. ಅಂಬೇಡ್ಕರವರು ಕಾನೂನು ಪದವಿಯನ್ನು ಮುಗಿಸಿ ಬರುವ ಮುಂಚೆಯೇ 1924ರಲ್ಲಿ ದೇವರಾಯ ಇಂಗಳಿಯವರು ಬೆಳಗಾವಿಯಲ್ಲಿ ಸಾಮಾಜಿಕ ಸುಧಾರಣಾ ಚಳುವಳಿಯನ್ನು ಪ್ರಾರಂಭಿಸಿ ಸ್ವತಂತ್ರ ದಲಿತ ಚಳುವಳಿಯನ್ನು ಕಟ್ಟಿದ್ದರು. ಭೀಮಾ ಕೋರೇಗಾಂವ ಘಟನೆಯ ಪರಿಣಾಮಗಳು ಮುಂಬೈಕರ್ನಾಟಕ ಭಾಗದ ದಲಿತರ ಮೇಲೆ ಪ್ರಭಾವ ಬೀರಿ ದಲಿತರಲ್ಲಿ ಜಾಗೃತಿ ಮೂಡಲು ಸಾಧ್ಯವಾಯಿತು. ಶ್ರೀ ದೇವರಾಯ ಇಂಗಳೆ ಅವರು 1926ರಲ್ಲಿ ಬೆಳಗಾವಿಯಲ್ಲಿ ಹಾಗೂ ಡಾ. ಅಂಬೇಡ್ಕರವರು 1936ರಲ್ಲಿ ಧಾರವಾಡದಲ್ಲಿ ದಲಿತರಿಗಾಗಿಯೇ ಪ್ರತ್ಯೇಕ ಶಾಲೆಗಳನ್ನು, ವಸತಿ ನಿಲಯಗಳನ್ನು ಸ್ಥಾಪಿಸಿದರು. (ಅಂಬೇಡ್ಕರವರು ಧಾರವಾಡದಲ್ಲಿ ಸ್ಥಾಪಿಸಿದ ಶಾಲೆಗೆ ಈಗ ಬುದ್ಧರಕ್ಷಿತ ಶಾಲೆ ಎಂದು ಕರೆಯುವರು) ದಲಿತರಿಗೆ ಶಿಕ್ಷಣದ ಅರಿವನ್ನು ಮೂಡಿಸಿದರು. ದೇವರಾಯ ಇಂಗಳೆ ಹಾಗೂ ಡಾ. ಅಂಬೇಡ್ಕರವರು 1924ರಲ್ಲಿ ಬೆಳಗಾವಿಯಲ್ಲಿ ದಲಿತ ಸಮ್ಮೇಳನ ಆಯೋಜಿಸಿ ಜನರಲ್ಲಿ ಶಿಕ್ಷಣದ ಹಾಗೂ ಉದ್ಯೋಗದ, ಮಹಿಳಾ ಸಬಲೀಕರಣದ ಬಗ್ಗೆ ಅರಿವು ಮೂಡಿಸಿದರು. ಹಿಂದೂ ಧರ್ಮದ ಸಾಮಾಜಿಕ, ಧಾರ್ಮಿಕ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಲು ಕರೆ ನೀಡಿದರು. 1918ರಲ್ಲಿ ದೇವರಾಯ ಇಂಗಳಿ ಅವರು 'ಕರ್ನಾಟಕ ಬಹಿಷ್ಕೃತ ಬೋಧಿನಿ' ಎಂಬ ನಾಟಕ ಬರೆದು ಆ ನಾಟಕದ ಮುಖಾಂತರ ದೇವದಾಸಿ ಎಂಬ ಅನಿಷ್ಠ ಪದ್ಧತಿಯ ವಿರುದ್ಧ ಶೋಷಿತರಲ್ಲಿ ಜಾಗೃತಿಯನ್ನುಂಟು ಮಾಡಿದರು.

1924ರಲ್ಲಿ ನಿಪ್ಪಾಣಿಯಲ್ಲ ಬಹಿಷ್ಕೃತ ಭಾರತ ಪ್ರಾಂತೀಯ ಸಮ್ಮೇಳನ ಆಯೋಜಿಸಿ ಡಾ. ಅಂಬೇಡ್ಕರವರನ್ನು ಆಹ್ವಾನಿಸಿ ದಲಿತ ಶಿಕ್ಷಣ ಹಾಗೂ ಸಬಲೀಕರಣದ ಬಗ್ಗೆ ಹಾಗೂ ಸಾಮಾಜಿಕ ಜಾಗೃತಿಯನ್ನು ಮೂಡಿಸಿದರು. ಇದೇ ರೀತಿಯಾಗಿ ವ್ಹಿ.ಎಲ್. ಪಾಟೀಲರು ಮಹಾರಾಷ್ಟ್ರ ಹಾಗೂ ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು, ವಸತಿ ನಿಲಯಗಳನ್ನು ಸ್ಥಾಪಿಸಿ ಹಿಂದುಳಿದವರಿಗೆ, ಶೋಷಿತರಿಗೆ ಶಿಕ್ಷಣ ನೀಡಿ ಅವರಲ್ಲಿ ಜಾಗೃತಿಯನ್ನು ತಂದರು. ಇದೇ ರೀತಿಯಾಗಿ ಮುಂಬೈ ಸರ್ಕಾರದಲ್ಲಿ ಶಿಕ್ಷಣ ಮಂತ್ರಿಯಾದ ಸರ್ ಸಿದ್ದಪ್ಪ ಕಂಬಳಿ ಹಾಗೂ ಡಾ. ಅಂಬೇಡ್ಕರವರು ಸೇರಿ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವಲ್ಲಿ ಪ್ರಮುಖ ಪಾತ್ರವಹಿಸಿ ಬೆಳಗಾವಿ ಪ್ರದೇಶದ ಜನರಿಗೆ ಶಿಕ್ಷಣ ನೀಡುವಲ್ಲಿ ಪ್ರಮುಖಪಾತ್ರ ವಹಿಸಿದರು. ಇವರ ಸುಧಾರಣಾ ಚಳುವಳಿಯು ಬೆಳಗಾವಿ ಭಾಗದಲ್ಲಿ ಜನರು ಜಾಗೃತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು.

**ಉಪಸಂಹಾರ:**

ಒಟ್ಟಾರೆಯಾಗಿ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾರತದಲ್ಲಿಯೇ ಬೆಳಗಾವಿಗೆ ಒಂದು ಐತಿಹಾಸಿಕ ಮಹತ್ವವಿದೆ. ಮುಂಬೈಕರ್ನಾಟಕದಲ್ಲಿ ಬೆಳಗಾವಿಯು ಸ್ವಾತಂತ್ರ್ಯ ಪೂರ್ವದಲ್ಲಿಯೇ ಕಿತ್ತೂರು ರಾಣಿ ಚೆನ್ನಮ್ಮಳು ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಈ ಭಾಗದ ಜನರಲ್ಲಿ ಸ್ವಾತಂತ್ರ್ಯ ಚಳುವಳಿಯ ಅರಿವು ಮೂಡಿಸಿದ್ದಳು. ಇದೇ ರೀತಿಯಾಗಿ 1924ರಲ್ಲಿ ಬೆಳಗಾವಿಯಲ್ಲಿ ನಡೆದ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನವು ಗಾಂಧೀಜಿಯವರು ಭಾಗವಹಿಸುವ ಮುಖಾಂತರ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳಗಾವಿಯು ಪ್ರಮುಖ ಪಾತ್ರ ವಹಿಸಿತು. ಇದೇ ರೀತಿಯಾಗಿ ಮುಂಬೈಕರ್ನಾಟಕದ ಬ್ರಾಹ್ಮಣೇತರ ಚಳುವಳಿಯ ಪ್ರಮುಖ ಕೇಂದ್ರವಾಗಿ ಬೆಳಗಾವಿಯು ಕಾರ್ಯನಿರ್ವಹಿಸಿತು.

1924ರಲ್ಲಿ ಗಾಂಧೀಜಿಯವರು ಬೆಳಗಾವಿ ಅಧಿವೇಶನದಲ್ಲಿ ಭಾಗವಹಿಸಿ ಅಸ್ಪೃಶ್ಯತೆ ನಿರ್ಮೂಲನೆ, ಗ್ರಾಮೀಣಾಭಿವೃದ್ಧಿ, ಖಾದಿ ಪ್ರಚಾರ, ನೈರ್ಮಲೀಕರಣ, ಮಹಿಳಾ ಸಬಲೀಕರಣ, ಸ್ವರಾಜ್ಯ ಮುಂತಾದ ಅವರ ರಚನಾತ್ಮಕ ಕಾರ್ಯಕ್ರಮಗಳು ದೇಶದ ತುಂಬೆಲ್ಲ ಪ್ರಚಾರ ಪಡೆದು ಭಾರತೀಯರನ್ನು ಒಂದುಗೂಡಿಸುವಲ್ಲಿ ಈ ಕಾರ್ಯಕ್ರಮಗಳು ಹಾಗೂ ಅವರ ಧ್ಯೇಯ ಉದ್ದೇಶಗಳು ಮಹತ್ವ ಪಾತ್ರವಹಿಸಿದವು. ಒಟ್ಟಾರೆಯಾಗಿ ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂಬೈಕರ್ನಾಟಕದ ಬೆಳಗಾವಿಯು ಅತ್ಯಂತ ಪ್ರಮುಖ ಪಾತ್ರವಹಿಸಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸಿದೆ.

**ಪರಾಮರ್ಶನ ಗ್ರಂಥಗಳು:**


1. Modern Indian History, S. Chand and A. C. Agarawal.
2. Indian National Movement and Constitutional Development. I. P. Sharma.
3. Karnataka History and Culture, Palakshi.
4. Belagavi Gazetteer
5. Caste Violence and Dalit Deprivation, Dr. A. S. Sujatha
6. Dalit Leaders and Movement in India, Arun Pal, Sunrise Publisher, Delhi.
7. Concise History of Karnataka, Dr. Suryanath Kamath.
8. ಸ್ವತಂತ್ರ ಗಂಗೆಯ ಸಾವಿರ ತೊರೆಗಳು, ಎನ್. ಪಿ. ಶಂಕರನಾರಾಯಣರಾವ್
9. ಸ್ತ್ರೀ ವಿಮೋಚನಾ ಹೋರಾಟಗಳು, ಮಂಗಲಾ ಕಾಳೆ, ಅನಾರ್ಯ ಪ್ರಕಾಶನ, ಧಾರವಾಡ, 1996
10. ಮಹಾತ್ಮ ಫುಲೆ, ಮುರಳಿಧರ ಜಗತಾಪ, ನವಕರ್ನಾಟಕ ಪ್ರಕಾಶನ, 1997
11. ಕೋರೆಗಾಂವ್ ಕದನ, ಮೂಲ : ಸುಧಾರಕ ಕಾಂಬ್ಳೆ, ಕನ್ನಡಕ್ಕೆ : ಸಿದ್ದಾರಾಮ ಕಾರ್ಣಿಕ, ಲಡಾಯಿ ಪ್ರಕಾಶನ, ಗದಗ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.